# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1088
02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
03. ಉತ್ತರಿಸುವ ದಿನಾಂಕ : 14.12.2023
04. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | "ಕಣ್ವ" ಹಗರಣದ ಕುರಿತು ಗೃಹ ಇಲಾಖೆ 2018ರಿಂದ ಇಲ್ಲಿಯವರೆಗೂ ಯಾವ, ಯಾವ ಕ್ರಮ ಕೈಗೊಂಡಿದೆ ಪ್ರತಿ ದೂರಿನ ಪಟ್ಟಿ ತೆಗೆದುಕೊಂಡ ಕ್ರಮಗಳ ಕುರಿತು ಸಂಪೂರ್ಣ ಮಾಹಿತಿ ನೀಡುವುದು; | **ಕಣ್ವ ಹಗರಣದ ಕುರಿತು 2018 ರಿಂದ ಇಲ್ಲಿಯವರೆಗೂ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:**<br>➢ ಸದರಿ ಪ್ರಕರಣಗಳಲ್ಲಿ 47 ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. 3 ಜನ ಆರೋಪಿಗಳು ಮರಣ ಹೊಂದಿರುತ್ತಾರೆ.<br>➢ ಆರೋಪಿತರಿಂದ ಸ್ವ-ಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತದೆ. ಆರೋಪಿಗಳ ಹೇಳಿಕೆಯ ಮೇರೆಗೆ ಸ್ಥಳದ ಮಹಜರ್ ಮಾಡಿ ದಾಖಲೆಗಳನ್ನು ವಶಪಡಿಸಿಕೊಂಡಿರುತ್ತೆ. ಆರೋಪಿಗಳಿಂದ ಸುಮಾರು 436 ಕೋಟಿ ರೂಪಾಯಿ ಬೆಲೆ ಬಾಳುವ 118 ಸ್ಥಿರಾಸ್ತಿ ಮತ್ತು 02 ಚರಾಸ್ತಿಗಳನ್ನು ಗುರುತಿಸಿ, ಸಕ್ಷಮ ಪ್ರಾಧಿಕಾರ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ಬೆಂಗಳೂರು ಹಾಗೂ ಇಡಿ ಯವರಿಗೆ ಮಾಹಿತಿಯನ್ನು ನೀಡಲಾಗಿದೆ.<br>➢ ಆರೋಪಿತರ ಇತರೆ ಸ್ಥಿರಾಸ್ತಿಗಳ ಮಾಹಿತಿ ಹಾಗೂ ದಾಖಲೆಗಳನ್ನು ನೀಡಲು ಎಜಿಆರ್ ಕಛೇರಿ, ಕಂದಾಯ ಭವನಕ್ಕೆ ಪತ್ರವನ್ನು ಸಲ್ಲಿಸಲಾಗಿದೆ.<br>➢ ಉಪನೊಂದಣಾಧಿಕಾರಿಗಳು, ರಾಜಾಜಿನಗರ, ಚಿಕ್ಕಬಳ್ಳಾಪುರ, ಕೊರಟಗೆರೆ, ಮಾದಕನಾಯಕಹಳ್ಳಿ, ನೆಲಮಂಗಲ ಹಾಗೂ ಇತ್ಯಾದಿ ಕಡೆಗಳಲ್ಲಿ ಆರೋಪಿಗಳ ಸ್ಥಿರಾಸ್ತಿಗಳ ಮಾಹಿತಿ ಹಾಗೂ ದಾಖಲೆಗಳನ್ನು ನೀಡಲು ಕೋರಿ ಪತ್ರವನ್ನು ಸಲ್ಲಿಸಲಾಗಿದೆ.<br>➢ ತನಿಖಾ ಕಾಲದಲ್ಲಿ ಸುಮಾರು ರೂ. 500 ಕೋಟಿಗಳಷ್ಟು ಹಣವನ್ನು ಈ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ನಿರ್ದೇಶಕರುಗಳು ಸೇರಿ ಮೋಸ ಮಾಡಿರುವ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿದೆ.<br>➢ ಇದುವರೆವಿಗೂ ಈ ಪ್ರಕರಣದಲ್ಲಿ 10125 ಹೂಡಿಕೆದಾರರು ದೂರನ್ನು ನೀಡಿದ್ದು, ದಾಖಲೆ ಮತ್ತು ಹೇಳಿಕೆಗಳನ್ನು ಪಡೆದುಕೊಳ್ಳಲಾಗಿದೆ. ಇದರ ಮೌಲ್ಯ ಸುಮಾರು ರೂ. 500 ಕೋಟಿಯಷ್ಟಿರುತ್ತದೆ. |

| | | |
|---|---|---|
| | | ➢ ಸಕ್ಷಮ ಪ್ರಾಧಿಕಾರ ಮತ್ತು ಇಡಿಗೆ ಕಳುಹಿಸಿದ ಮಾಹಿತಿಯ ಮೇರೆಗೆ ಆರೋಪಿಗಳ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಮುಂದಿನ ಕ್ರಮ ಜರುಗಿಸಲಾಗುತ್ತಿದೆ.<br>➢ ಇದುವರೆವಿಗೂ ಸುಮಾರು 150 ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಿಸಲಾಗಿದೆ. ಸುಮಾರು 50 ಲಕ್ಷ ರೂಗಳನ್ನು ಫ್ರೀಜ್ ಮಾಡಲಾಗಿದೆ.<br>➢ ಕಣ್ವ ಪ್ರಕರಣಗಳಾದ ಹೊಸಕೋಟೆ ಪೊಲೀಸ್ ಠಾಣೆಯ ಮೊ.ಸಂ. 304/2020 ಮತ್ತು ವರ್ತೂರು ಪೊಲೀಸ್ ಠಾಣೆಯ ಮೊ.ಸಂ. 321/2019 ರ ಪ್ರಕರಣದಲ್ಲಿ ಮಾನ್ಯ ಪಿಡಿಜೆ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರದಲ್ಲಿ ಪ್ರಾಥಮಿಕ ದೋಷಾರೋಪಣಾ ಪಟ್ಟಿಯನ್ನು ಆರೋಪಿಗಳ ವಿರುದ್ಧ ಸಲ್ಲಿಸಿದ್ದು, ಘನ ನ್ಯಾಯಾಲಯವು ಸ್ಪೆಷಲ್ ಸಿಸಿ ಸಂ. 191/2021 ಮತ್ತು 192/2021 ನೀಡಿರುತ್ತದೆ.<br>➢ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ಫಾರೆನ್ಸಿಕ್ ಆಡಿಟ್ ಮಾಡಿಸುತ್ತಿದೆ.<br>➢ ತನಿಖಾಧಿಕಾರಿಗಳು ಸಲ್ಲಿಸಿದ ಮಾಹಿತಿಯ ಮೇರೆಗೆ ಸಕ್ಷಮ ಪ್ರಾಧಿಕಾರ ಮತ್ತು ಇಡಿ ರವರು ಆರೋಪಿಗಳಿಗೆ ಸಂಬಂಧಿಸಿದ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ದಿನಾಂಕ: 26.02.2021 ರಂದು ಮುಟ್ಟುಗೋಲು ಹಾಕಿಕೊಂಡು, ಸುತ್ತೋಲೆ ಹೊರಡಿಸಲಾಗಿದೆ.<br>➢ ಈ ಪ್ರಕರಣಗಳ ತನಿಖೆಯು ಮುಂದುವರೆದಿದೆ. |
| ಆ | ಮೇ 2018ರ ನಂತರ ನೊಂದಾಯಿತ ಎಲ್ಲಾ ಹಗರಣಗಳ ಸಾಮೂಹಿಕ ಹೂಡಿಕೆ ಯೋಜನೆಗಳಿಗೆ ಸಂಬಂಧಿಸಿದ ಅಪರಾಧ ಪ್ರಕರಣಗಳ ಪಟ್ಟಿಯನ್ನು ಒದಗಿಸುವುದು. | ಶ್ರೀ ಕಣ್ವ ಸೌಹಾರ್ದ ಕೋ-ಅಪರೇಟಿವ್ ಸೊಸೈಟಿಯ ಅವ್ಯವಹಾರಗಳಿಗೆ ಸಂಬಂಧಿಸಿದ ಎಫ್.ಐ.ಆರ್. ಸಂಖ್ಯೆ, ವರ್ಷ, ಜಿಲ್ಲೆ, ಪೊಲೀಸ್ ಠಾಣೆ ವಿವರ ಹಾಗೂ ಪ್ರತೀ ಹಗರಣದಲ್ಲಿ CrPC ಯ S-161 ರನ್ವಯ ತನಿಖಾಧಿಕಾರಿಗಳು ದಾಖಲಿಸಿದ ಒಟ್ಟು ಸಂತ್ರಸ್ತರ ಹೇಳಿಕೆಗಳ ಸಂಖ್ಯೆಯ ವಿವರಗಳನ್ನು <u>ಅನುಬಂಧದಲ್ಲಿ</u> ನೀಡಲಾಗಿದೆ. |
| ಇ | ಪ್ರತೀ ಹಗರಣಕ್ಕೆ ಸಂಬಂಧಿಸಿದ ಎಫ್.ಐ.ಆರ್. ಸಂಖ್ಯೆ ವರ್ಷ, ಜಿಲ್ಲೆ, ಪೊಲೀಸ್ ಠಾಣೆ ವಿವರ ಹಾಗೂ ಪ್ರತೀ ಹಗರಣದಲ್ಲಿ CrPC ಯ S-161 ರ ಅನ್ವಯ ತನಿಖಾಧಿಕಾರಿಗಳು ದಾಖಲಿಸಿದ ಒಟ್ಟು ಸಂತ್ರಸ್ತರ ಹೇಳಿಕೆಗಳ ಸಂಖ್ಯೆಯನ್ನು ನೀಡುವುದು; | |
| ಈ | ಪ್ರತೀ ಹಗರಣದಲ್ಲಿ ಸಂತ್ರಸ್ತರಿಂದ ವಿಚಾರಣೆಯಲ್ಲಿ ವರದಿಯಾದ ಮತ್ತು ತನಿಖೆಯಿಂದ ಪತ್ತೆ ಹಚ್ಚಲಾದ ವಿವರಗಳೇನು; | ಕಣ್ವ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯ ಪ್ರಕರಣಗಳಲ್ಲಿ ವಿವಿಧ ಪಿರ್ಯಾದುಗಳು ದಾಖಲಾಗಿದ್ದು, ಎಲ್ಲಾ ಫಿರ್ಯಾದುಗಳನ್ನು ಒಟ್ಟುಗೂಡಿಸಿ, ತನಿಖೆಯನ್ನು ಮಾಡಲಾಗುತ್ತಿದೆ. |

| | | |
|---|---|---|
| | | ಎಲ್ಲಾ ಸಂತ್ರಸ್ತರನ್ನು ವಿಚಾರಣೆಗೊಳಪಡಿಸಿದ್ದು, ಸದರಿಯವರು ವಿವಿಧ ಸ್ಕೀಮ್‌ಗಳಲ್ಲಿ ಹೂಡಿಕೆ ಮಾಡಿರುವ ಬಗ್ಗೆ ಹಾಗೂ ಹೂಡಿಕೆಯ ಅವಧಿಯು ಮುಕ್ತಾಯವಾಗಿದ್ದರೂ, ಹಣವನ್ನು ವಾಪಸ್ಸು ನೀಡದೆ ಮೋಸ ಮಾಡಿರುವ ಬಗ್ಗೆ, ಇನ್ನೂ ಕೆಲ ಸಂತ್ರಸ್ಥರಿಗೆ ನಿಶ್ಚಿತ ಠೇವಣಿ, ಸುವರ್ಣನಿಧಿ ಹಾಗೂ ವಿವಿಧ ಸ್ಕೀಮ್‌ಗಳಲ್ಲಿ ಹೂಡಿಕೆ ಮಾಡಿಸಿಕೊಂಡು ಹೂಡಿಕೆಯ ದಿನಾಂಕ ಮುಕ್ತಾಯವಾಗಿದ್ದರೂ, ಹೂಡಿಕೆ ಹಣವನ್ನು ವಾಪಸ್ಸು ಕೊಡದೆ, ಬಾಂಡ್‌ಗಳನ್ನು ಹೂಡಿಕೆದಾರರಿಂದ ವಾಪಸ್ಸು ಪಡೆದುಕೊಂಡು, ಹೂಡಿಕೆ ಹಣದ ಬದಲಿಗೆ ಸೈಟ್‌ಗಳನ್ನು ಕೊಡುವುದಾಗಿ ಹೇಳಿ, ನಂಬಿಸಿ, ಸೇಲ್ ಅಗ್ರಿಮೆಂಟ್ ಮಾಡಿಸಿಕೊಟ್ಟಿರುತ್ತಾರೆ. ಆದರೆ ಈ ಸೇಲ್ ಅಗ್ರಿಮೆಂಟ್ ರಿಜಿಸ್ಟರ್ ಆಗಿರುವುದಿಲ್ಲ. ಪತ್ತೆ ಹಚ್ಚಲಾದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಉ | ಪ್ರತೀ ಹಗರಣದಲ್ಲಿ ಸಕ್ರಿಯ ಪ್ರಗತಿಯನ್ನು ಪ್ರದರ್ಶಿಸಲು CrPC ಯ S-17ಗೆ ಅನುಸಾರವಾಗಿ ಅಂತಿಮ ಆರೋಪ ಪಟ್ಟಿಗಳನ್ನು ಸಲ್ಲಿಸಲು ತನಿಖಾ ಅವಧಿಯಂತಹ ಪ್ರಸ್ತುತ ಸ್ಥಿತಿಯ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ಒದಗಿಸುವುದು; | ಕಣ್ವ ಪ್ರಕರಣಗಳಾದ ಹೊಸಕೋಟೆ ಪೊಲೀಸ್ ಠಾಣೆಯ ಮೊ.ಸಂ. 304/2020 ಮತ್ತು ವರ್ತೂರು ಪೊಲೀಸ್ ಠಾಣೆಯ ಮೊ.ಸಂ. 321/2019ರ ಪ್ರಕರಣದಲ್ಲಿ ಮಾನ್ಯ ಪಿಡಿಜೆ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರದಲ್ಲಿ ಪ್ರಾಥಮಿಕ ದೋಷಾರೋಪಣಾ ಪಟ್ಟಿಯನ್ನು ಆರೋಪಿಗಳ ವಿರುದ್ಧ ಸಲ್ಲಿಸಿದ್ದು, ಘನ ನ್ಯಾಯಾಲಯವು ಸ್ಪೆಷಲ್ ಸಿಸಿ ಸಂ. 191/2021 ಮತ್ತು 192/2021 ನೀಡಿರುತ್ತದೆ. ಸದರಿ ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತವೆ. ಉಳಿದ 19 ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಫಾರೆನ್ಸಿಕ್ ಆಡಿಟ್ ನಡೆಯುತ್ತಿದ್ದು, ವರದಿ ಬಂದ ನಂತರ ತನಿಖೆ ಪೂರೈಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. |
| ಊ | ಈ ಹಗರಣದಲ್ಲಿ ಸಾಧಿಸಲಾದ ದೋಷಾರೋಪಣೆಗಳನ್ನು ಮತ್ತು ಕಳೆದುಹೋದ ದೋಷ ಮುಕ್ತಗಳ ಕುರಿತು ಮಾಹಿತಿಯನ್ನು ಒದಗಿಸುವುದು? | ಈ ಪ್ರಕರಣಗಳು ತನಿಖಾ ಮತ್ತು ವಿಚಾರಣಾ ಹಂತದಲ್ಲಿರುತ್ತದೆ. |

HD 28 SDN 2023

ಪರಮೇಶ್ವರ

(ಡಾ:ಜಿ.ಪರಮೇಶ್ವರ)

ಗೃಹ ಸಚಿವರು

# ಅನುಬಂಧ

| ಕ್ರ.ಸಂ | ಎಫ್.ಐ.ಆರ್ ಸಂಖ್ಯೆ | ವರ್ಷ | ಜಿಲ್ಲೆ/ನಗರ | ಪೊಲೀಸ್ ಠಾಣೆ ಹೆಸರು | ಒಟ್ಟು ಸಂತ್ರಸ್ಥರ ಹೇಳಿಕೆಗಳು |
|---|---|---|---|---|---|
| 1 | 321 | 2019 | ಬೆಂಗಳೂರು ನಗರ | ವರ್ತೂರು | ಸದರಿ ಪ್ರಕರಣಗಳಲ್ಲಿ ಸುಮಾರು 10125 ಸಾರ್ವಜನಿಕರು ದೂರು ಮತ್ತು ದಾಖಲಾತಿಗಳನ್ನು ನೀಡಿರುತ್ತಾರೆ. |
| 2 | 340 | 2019 | ಬೆಂಗಳೂರು ನಗರ | ಬಸವೇಶ್ವರ ನಗರ | |
| 3 | 341 | 2019 | ಬೆಂಗಳೂರು ನಗರ | ಬಸವೇಶ್ವರ ನಗರ | |
| 4 | 342 | 2019 | ಬೆಂಗಳೂರು ನಗರ | ಬಸವೇಶ್ವರ ನಗರ | |
| 5 | 207 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 6 | 208 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 7 | 209 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 8 | 210 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 9 | 211 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 10 | 212 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 11 | 213 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 12 | 214 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 13 | 215 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 14 | 216 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 15 | 217 | 2020 | ಬೆಂಗಳೂರು ನಗರ | ಬಸವೇಶ್ವರ ನಗರ | |
| 16 | 14 | 2020 | ಬೆಂಗಳೂರು ನಗರ | ಕಬ್ಬನ್ ಪಾರ್ಕ್ | |
| 17 | 19 | 2020 | ಬೆಂಗಳೂರು ನಗರ | ಬಾಣಸವಾಡಿ | |
| 18 | 304 | 2020 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಹೊಸಕೋಟೆ | |
| 19 | 270 | 2021 | ಬೆಂಗಳೂರು ನಗರ | ಬಸವೇಶ್ವರ ನಗರ | |
| 20 | 277 | 2021 | ಬೆಂಗಳೂರು ನಗರ | ಬಸವೇಶ್ವರ ನಗರ | |
| 21 | 125 | 2021 | ಬೆಂಗಳೂರು ಜಿಲ್ಲೆ | ಮಾದನಾಯಕನಹಳ್ಳಿ | |